# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – I | ಬೆಂಗಳೂರು, ಸೋಮವಾರ, ೧೬, ಫೆಬ್ರವರಿ, ೨೦೨೬ ( ಮಾಘ , ೨೭, ಶಕವರ್ಷ, ೧೯೪೭)<br>BENGALURU, MONDAY, 16, FEBRUARY, 2026 ( MAGHA , 27, SHAKAVARSHA, 1947) | ನಂ. ೧೫೯<br>No. 159 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಕಾಯ್ದೆ, 2025ರ ಕಲಂ 20 ರಡಿಯಲ್ಲಿ, ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ನಿಯಮಗಳು, 2025 ರ ನಿಯಮ 17ರ ಜೊತೆಗೆ ಓದಿದಂತೆ, ಗಿಗ್ ಕಾರ್ಮಿಕರ ಕಲ್ಯಾಣ ಶುಲ್ಕದ ಸಂಗ್ರಹಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 37 ಶಾಸನ 2024, ದಿನಾಂಕ:12.09.2025.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 413 ಎಲ್‌ಇಟಿ 2023, ದಿನಾಂಕ:19.11.2025.

----

**ಪ್ರಸ್ತಾವನೆ**:

ಗಿಗ್ ಹಾಗೂ ಪ್ಲಾಟ್‌ಫಾರ್ಮ್ ಆಧಾರಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ವಿಸ್ತರಿಸಲು ಮತ್ತು ಸಾಮಾಜಿಕ ಭದ್ರತಾ ಯೋಜನೆಗಳಿಗೆ ನಿಧಿ ಸಂಗ್ರಹಿಸುವ ಉದ್ದೇಶದಿಂದ ಶುಲ್ಕವನ್ನು ವಿಧಿಸಲು, ಮೇಲೆ ಓದಲಾದ (1)ರಲ್ಲಿ ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಕಾಯ್ದೆ, 2025 ಅನ್ನು ಜಾರಿಗೆ ತರಲಾಗಿದೆ. ಮುಂದುವರೆದು, ಮೇಲೆ ಓದಲಾದ (2)ರಲ್ಲಿ ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ನಿಯಮಗಳು, 2025 ಅನ್ನು ಅಧಿಸೂಚಿಸಲಾಗಿದೆ.

ಮೇಲ್ಕಂಡ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಕಲ್ಯಾಣ ಶುಲ್ಕ ವಿಧಿಸುವಿಕೆ ಮತ್ತು ಸಂಗ್ರಹವು ಷೆಡ್ಯೂಲ್–Iರಲ್ಲಿ ಉಲ್ಲೇಖಿಸಲಾದ ಎಲ್ಲಾ ಪ್ಲಾಟ್‌ಫಾರ್ಮ್‌ಗಳಿಗೆ ಕಡ್ಡಾಯವಾಗಿರುತ್ತದೆ. ಡಿಜಿಟಲ್ ಮಧ್ಯವರ್ತಿಯ ಮೂಲಕ ಗಿಗ್ ಕಾರ್ಮಿಕರು ಕೈಗೊಳ್ಳುವ ಪ್ರತಿಯೊಂದು ಗಿಗ್ ಕಾರ್ಯಕ್ಕಾಗಿ ಅವರಿಗೆ ನೀಡಲಾಗುವ ಅಂತಿಮ ಪಾವತಿಗಳ ಮೇಲೆ ಈ ಕಲ್ಯಾಣ ಶುಲ್ಕವನ್ನು ವಿಧಿಸಲಾಗುತ್ತದೆ.

ಕಾಯ್ದೆಯ ಸೆಕ್ಷನ್ 20ರ ಉದೃತ ಭಾಗ ಈ ಕೆಳಕಂಡಂತಿದೆ;

“**20. ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಶುಲ್ಕ:** (1) ಸಂಗ್ರಹಕಾರರು ಅಥವಾ ವೇದಿಕೆಗಳಿಂದ “ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಶುಲ್ಕ,” ವೆಂದು ಕರೆಯುವ ಕ್ಷೇಮಾಭಿವೃದ್ಧಿ ಶುಲ್ಕವನ್ನು ವಿಧಿಸತಕ್ಕದ್ದು ಅದು ರಾಜ್ಯ ಸರ್ಕಾರವು

ಅಧಿಸೂಚಿಸಬಹುದಾದಂತೆ ಅಧಿನಿಯಮವು ಜಾರಿಗೆ ಬಂದ ಆರು ತಿಂಗಳೊಳಗಾಗಿ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಪ್ರತಿಯೊಂದು ವಹಿವಾಟಿನಲ್ಲಿ ಪಾವತಿ ನೀಡಿಕೆಯ ಶೇಕಡಾ ಒಂದರಷ್ಟಕ್ಕೆ ಕಡಿಮೆಯಲ್ಲದ ಆದರೆ ಶೇಕಡಾ ಐದರಷ್ಟನ್ನು ಮೀರದಂತೆ ಇರತಕ್ಕದ್ದು.

(2) ರಾಜ್ಯ ಸರ್ಕಾರವು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ವಿವಿಧ ವರ್ಗದ ಸಂಗ್ರಹಕಾರರಿಗಾಗಿ ಪ್ರತಿಯೊಂದು ವಹಿವಾಟಿನ ಮೇಲೆ ಕ್ಯಾಪ್ ಯುಕ್ತ ಅಥವಾ ಕ್ಯಾಪ್ ಇಲ್ಲದೆ ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಶುಲ್ಕ ಪಾವತಿ ನೀಡಿಕೆ ಮೇಲೆ ವಿವಿಧ ಶೇಕಡಾವಾರನ್ನು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸತಕ್ಕದ್ದು.

(3) ಶುಲ್ಕವನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಸಮಯದೊಳಗೆ ರಾಜ್ಯ ಸರ್ಕಾರವು ಸಂಗ್ರಹಿಸತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ವಿಧಿಸಲಾದ ಕ್ಷೇಮಾಭಿವೃದ್ಧಿ ಶುಲ್ಕವನ್ನು ಪ್ರತಿ ತ್ರೈಮಾಸಿಕದ ಕೊನೆಯಲ್ಲಿ ನಿಯಮಿಸಬಹುದಾದಂಥ ವಿಧಾನದಲ್ಲಿ ಸಂಗ್ರಹಕಾರ ಅಥವಾ ವೇದಿಕೆಯು ಠೇವಣಿ ಇರಿಸತಕ್ಕದ್ದು.

ಮುಂದುವರೆದು, '**ಸಂಗ್ರಹಕಾರ**', '**ವೇದಿಕೆ**' and '**ಪಾವತಿ ನೀಡಿಕೆ**' ಮತ್ತು '**ಕ್ಷೇಮಾಭಿವೃದ್ಧಿ ಶುಲ್ಕ**' ಪರಿಭಾಷೆಗಳು ಈ ಕೆಳಕಂಡಂತಿವೆ;

**ಕಲಂ 2(ಬಿ) "ಸಂಗ್ರಹಕಾರ"** ಎಂದರೆ, ಮಾರಾಟಗಾರ ಅಥವಾ ಸೇವೆಯನ್ನು ಒದಗಿಸುವವರೊಂದಿಗೆ ಸರಕುಗಳನ್ನು ಕೊಳ್ಳುವವರು ಅಥವಾ ಸೇವೆಯನ್ನು ಬಳಸಿಕೊಳ್ಳುವವರನ್ನು ಸಂಪರ್ಕಿಸಲು ಇರುವ ಡಿಜಿಟಲ್ ಮಧ್ಯಸ್ಥಿಕೆ ಹಾಗೂ ಸೇವೆಗಳನ್ನು ಒದಗಿಸುವುದಕ್ಕಾಗಿ ಒಂದು ಅಥವಾ ಹೆಚ್ಚಿನ ಸಂಗ್ರಹಕಾರರೊಂದಿಗೆ ಸಮನ್ವಯಗೊಳಿಸುವ ಯಾವುದೇ ಘಟಕವನ್ನು ಒಳಗೊಳ್ಳುವುದು;'

**ಕಲಂ 2(ಎಫ್) 'ಪಾವತಿ ನೀಡಿಕೆ" (payout)** ಕಾರ್ಯನಿರ್ವಹಿಸಿದ್ದಕ್ಕೆ, ಅಥವಾ ಸೇವೆ ಸಲ್ಲಿಸಿದ್ದಕ್ಕೆ ಸಂಗ್ರಹಕಾರ ಅಥವಾ ವೇದಿಕೆಯು ಗಿಗ್ ಎಂದರೆ, ವೇದಿಕೆಯಲ್ಲಿ ಯಾವುದೇ ಕಾರ್ಮಿಕನಿಗೆ ಮಾಡಿದ ಯಾವುದೇ ಅಂತಿಮ ಸಂದಾಯಗಳು;'

**ಕಲಂ 2(ಜಿ) "ವೇದಿಕೆ"** ಎಂದರೆ ಸೇವೆಯನ್ನು ಸ್ವೀಕರಿಸುವವರ ಕೋರಿಕೆಯ ಮೇರೆಗೆ, ಪಾವತಿಯ ಉದ್ದೇಶಕ್ಕಾಗಿ ಕೆಲವು ಸ್ಥಳದಲ್ಲಿನ ವ್ಯಕ್ತಿಗಳ ಮೂಲಕ ಕೆಲಸವನ್ನು ನಿರ್ವಹಿಸುವ ಸಂಸ್ಥೆಯನ್ನು ಒಳಗೊಳ್ಳುವ ಹಾಗೂ ದತ್ತಾಂಶದ ಮೇಲೆ ಅವಲಂಬಿತವಾಗಿರುವ ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ಮಾನ ಕೈಗೊಳ್ಳುವ ವ್ಯವಸ್ಥೆಗಳ ಬಳಕೆಯನ್ನು ಅಥವಾ ಮಾನವ ನಿರ್ಧರಣೆಯನ್ನು ಒಳಗೊಳ್ಳುವ ವಿದ್ಯುನ್ಮಾನ ವಿಧಾನಗಳ ಮೂಲಕ ಸೇವೆಯನ್ನು ಒದಗಿಸುವ ಯಾವುದೇ ವ್ಯವಸ್ಥೆ;'

**ಕಲಂ 2 (ಎಂ) "ಕ್ಷೇಮಾಭಿವೃದ್ಧಿ ಶುಲ್ಕ"** ಎಂದರೆ, ಈ ಅಧಿನಿಯಮದ 20ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ವಿಧಿಸಲಾದ ಶುಲ್ಕ.'

ಕಾಯ್ದೆಯ ಸೆಕ್ಷನ್ 21ರ ವಿಧಿಗಳ ಪ್ರಕಾರ, ಪಾವತಿ ಮತ್ತು ಕಲ್ಯಾಣ ಶುಲ್ಕ ಪರಿಶೀಲನಾ ವ್ಯವಸ್ಥೆಯ ಉದ್ಧೃತ ಭಾಗ ಈ ಕೆಳಕಂಡಂತೆ;

**21. ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ, ಪರಿಶೀಲನಾ ವ್ಯವಸ್ಥೆ:**

(1) ವೇದಿಕೆಗಳಲ್ಲಿ ಮಾಡಲಾದ ಪ್ರತಿಯೊಂದು ವಹಿವಾಟಿನ ಮೂಲಕ ಉಂಟಾದ ಎಲ್ಲಾ ಸಂದಾಯಗಳನ್ನು ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯಲ್ಲಿ (PWFVS) ಇರಿಸತಕ್ಕದ್ದು, ಅದನ್ನು ರಾಜ್ಯ ಸರ್ಕಾರವು ನಿರ್ವಹಿಸತಕ್ಕದ್ದು ಮತ್ತು ಮಂಡಳಿಯು ಮೇಲ್ವಿಚಾರಣೆ ನಡೆಸತಕ್ಕದ್ದು.

(2) ಗಿಗ್ ಕಾರ್ಮಿಕರಿಗೆ ಮಾಡಲಾದ ಪ್ರತಿಯೊಂದು ಪಾವತಿಯು ಮತ್ತು ಕಟಾವಣೆ ಮಾಡಲಾದ ಕ್ಷೇಮಾಭಿವೃದ್ಧಿ ಶುಲ್ಕವನ್ನು ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗೆ ಸಂಬಂಧಿಸಿದ ಪ್ರತಿಯೊಂದು ವಹಿವಾಟಿಗಾಗಿ ನಿಯಮಿಸಬಹುದಾದಂಥ ವಿಧಾನದಲ್ಲಿ ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯಲ್ಲಿ (PWFVS) ದಾಖಲಿಸತಕ್ಕದ್ದು.

(3) ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಹಂತದಲ್ಲಿ ಸಂಗ್ರಹಿಸಿದ ಮತ್ತು ವ್ಯಯಿಸಿದ ಕ್ಷೇಮಾಭಿವೃದ್ಧಿ ಶುಲ್ಕದ ವಿವರಗಳನ್ನು ಬಹಿರಂಗಪಡಿಸತಕ್ಕದ್ದು ಹಾಗೂ ಅದನ್ನು ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯಲ್ಲಿ (PWFVS) ಲಭ್ಯವಾಗುವಂತೆ ಮಾಡತಕ್ಕದ್ದು.

(4) ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯು (PWFVS) ದತ್ತಾಂಶ ರಕ್ಷಣೆಯ ಮೇಲೆ ತತ್ಕಾಲದಲ್ಲಿ ಜಾರಿಯಲ್ಲಿರುವ ಅನ್ವಯವಾಗುವ ಕೇಂದ್ರ ಮತ್ತು ರಾಜ್ಯ ಶಾಸನಗಳ ಅನುಸಾರವಾಗಿ ಇರತಕ್ಕದ್ದು:

ಪರಂತು ಮಂಡಳಿಯ ಮೂಲಕ ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯನ್ನು (PWFVS) ಕಾರ್ಯಾಚರಿಸುವವರೆಗೆ, ಸರ್ಕಾರವು ಯುಕ್ತವಾಗಿ ಸ್ವಯಂ ವರದಿಮಾಡಿಕೊಳ್ಳುವ ಮತ್ತು ಪ್ರತಿ ತ್ರೈಮಾಸಿಕ ವಹಿವಾಟಿನಲ್ಲಿ ಅವರ ಗಿಗ್ ಕಾರ್ಮಿಕರಿಗೆ ಪಾವತಿ ನೀಡಿಕೆಯ ವರದಿಗಳನ್ನು ಸಲ್ಲಿಸುವ ಅಂಥ ಸಂಗ್ರಹಕರರು ಅಥವಾ ವೇದಿಕೆಗಳನ್ನು ವಿನಾಯಿತಿಸಬಹುದು.

ಮುಂದುವರೆದು, ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ನಿಯಮಗಳು, 2025 ರ ನಿಯಮ 17 ರಲ್ಲಿ ನಿಗದಿಪಡಿಸಿದಂತೆ, ಪ್ರತಿಯೊಂದು ಪ್ಲಾಟ್‌ಫಾರ್ಮ್ ಅಥವಾ ಅಗ್ರಿಗೇಟರ್ ಕಡ್ಡಾಯವಾಗಿ ಕಲ್ಯಾಣ ಶುಲ್ಕವನ್ನು ಪಾವತಿಸಬೇಕು; ಅದರ ವಿವರಗಳನ್ನು ಕೆಳಗೆ ಪುನರುಚ್ಚರಿಸಲಾಗಿದೆ;

**17. ಕ್ಷೇಮಾಭಿವೃದ್ಧಿ ಶುಲ್ಕವನ್ನು ಸಂಗ್ರಹಿಸುವುದು.**- (1) ರಾಜ್ಯ ಸರ್ಕಾರವು, ಅಧಿನಿಯಮದ ಪ್ರಕರಣ 20 ರ ಉಪ-ಪ್ರಕರಣ (3)ರ ಅಡಿಯಲ್ಲಿ ನಿಗದಿಪಡಿಸಿದಂತೆ ಕ್ಷೇಮಾಭಿವೃದ್ಧಿ ಶುಲ್ಕವನ್ನು ಈ ಕೆಳಗಿನ ವಿಧಾನದಲ್ಲಿ ಸಂಗ್ರಹಿಸತಕ್ಕದ್ದು:

(2) ಸೇವಾ ಸಂಯೋಜನಕಾರನು ಪ್ರತಿ ತ್ರೈಮಾಸಿಕದ ಅಂತ್ಯದಿಂದ ಐದು ಕೆಲಸದ ದಿನಗಳೊಳಗೆ, ಕ್ಷೇಮಾಭಿವೃದ್ಧಿ ಶುಲ್ಕವನ್ನು ಸ್ವಯಂಚಾಲಿತವಾಗಿ ಲೆಕ್ಕ ಹಾಕತಕ್ಕದ್ದು ಮತ್ತು ಅಂತಹ ಕ್ಷೇಮಾಭಿವೃದ್ಧಿ ಶುಲ್ಕವನ್ನು ತ್ರೈಮಾಸಿಕದ ಆಧಾರದ ಮೇಲೆ ಸರಳ ಪ್ರಮಾಣೀಕೃತ ನಮೂನೆಯಲ್ಲಿ ಸ್ವಯಂ ಘೋಷಿಸತಕ್ಕದ್ದು ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸುವ ದರಗಳಲ್ಲಿ (ಇತ್ಯರ್ಥವಾದ ಪಾವತಿಗಳನ್ನು ಹೊರತುಪಡಿಸಿ) ಕ್ಷೇಮಾಭಿವೃದ್ಧಿ ಶುಲ್ಕವನ್ನು ಪಾವತಿಸತಕ್ಕದ್ದು.

**ವಿವರಣೆ**-ಇತ್ಯರ್ಥವಾದ ಪಾವತಿಗಳು ಎಂದರೆ, ರೆಫರಲ್ ಶುಲ್ಕಗಳು, ಪ್ರೋತ್ಸಾಹಕಗಳು ಮತ್ತು ಅಂತಹುದೇ ರೀತಿಯ ಇತರ ಪಾವತಿಗಳನ್ನು ಒಳಗೊಂಡಂತೆ ಯಾವುದೇ ಬಕ್ಷೀಸು, ಎಕ್ಸ್ ಗ್ರೇಷಿಯಾ/ಈವೆಂಟ್-ಆಧಾರಿತ/ವಿಶೇಷ ಪಾವತಿ(ಗಳು) ಎಂದರ್ಥ.

ಮೇಲ್ಕಂಡ ಕಾಯ್ದೆ ಮತ್ತು ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ಹಾಗೂ ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗಿಗ್ ಹಾಗೂ ಪ್ಲಾಟ್‌ಫಾರ್ಮ್ ಆಧಾರಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಕ್ರಮಗಳನ್ನು ವಿಸ್ತರಿಸುವ ಉದ್ದೇಶದಿಂದ, ಈ ಮೇಲೆ ವ್ಯಾಖ್ಯಾನಿಸಿ ವಿವರಿಸಲಾದ ಕಲ್ಯಾಣ ಶುಲ್ಕವನ್ನು ವಿಧಿಸಿ ಸಂಗ್ರಹಿಸಲು ಸರ್ಕಾರವು ನಿರ್ಧರಿಸಿದೆ.

ಮೇಲ್ಕಂಡ ವ್ಯಾಖ್ಯಾನದ ವ್ಯಾಪ್ತಿಗೆ ಒಳಪಡುವ ಹಾಗೂ ಕಾಯ್ದೆಯ ಷೆಡ್ಯೂಲ್–I ಯಲ್ಲಿ ಸೇರಿಸಲಾದ ಎಲ್ಲಾ ಪ್ಲಾಟ್‌ಫಾರ್ಮ್‌ಗಳು ಮತ್ತು ಅಗ್ರಿಗೇಟರ್‌ಗಳು ತಕ್ಷಣದಿಂದಲೇ ಕಡ್ಡಾಯವಾಗಿ ಕಲ್ಯಾಣ ಶುಲ್ಕವನ್ನು ಪಾವತಿಸಬೇಕು. ಈ ಸಂಬಂಧವಾಗಿ ಕೆಳಕಂಡಂತೆ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಕಾಇ 413 ಎಲ್‌ಇಟಿ 2023,</u>**
**<u>ಬೆಂಗಳೂರು, ದಿನಾಂಕ:13/02/2026</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನೆ ಯಲ್ಲಿ, ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಕಾಯ್ದೆ, 2025 ಮತ್ತು ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ನಿಯಮಗಳು, 2025 ರ ಪ್ರಾವಧಾನಗಳನ್ನು ಜಾರಿಗೆ ತರುವ ಸಲುವಾಗಿ ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪ್ಲಾಟ್‌ಫಾರ್ಮ್‌ಗಳು ಮತ್ತು ಅಗ್ರಿಗೇಟರ್‌ಗಳು ತಮ್ಮ ಗಿಗ್ ಕಾರ್ಮಿಕರಿಗೆ ನೀಡುವ ಪ್ರತಿಯೊಂದು ಗಿಗ್ ಕಾರ್ಯದ ಪಾವತಿಗಳ ಮೇಲೆ ಈ ಕೆಳಕಂಡ ದರದಲ್ಲಿ ಕಲ್ಯಾಣ ಶುಲ್ಕವನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪಾವತಿಸುವಂತೆ ಆದೇಶಿಸಿದೆ.

**1. Ride-Hailing Services.**

1. Two-Wheeler (2W): 1% and a Cap of ₹0.50.
2. Three-Wheeler (3W): 1% and a Cap of ₹0.75.
3. Four-Wheeler (4W): 1% and a Cap of ₹1.00.

**2. Food and Grocery Delivery Services.**

1. 2W:1% and a Cap of ₹0.50.

**3. Logistics Services.**

1. Two-Wheeler (2W): 1% and a Cap of ₹0.50.
2. Three-Wheeler (3W): 1% and a Cap of ₹0.75.



3. Light Commercial Vehicle (LCV): 1% and a Cap of ₹1.00.
4. Heavy Commercial Vehicle (HCV): 1% and a Cap of ₹1.50.

**4. E-Marketplace Services.**

1. 2W:1% and a Cap of ₹0.50.
2. Three-Wheeler (3W): 1% and a Cap of ₹0.75.
3. Light Commercial Vehicle (LCV): 1% and a Cap of ₹1.00.

**5. Professional Activity Providers.**

1. 1% and a Cap of ₹1.50.

ಕಲ್ಯಾಣ ಶುಲ್ಕವನ್ನು ಪಾವತಿಸಬೇಕಾದ ಬ್ಯಾಂಕ್ ವಿವರಗಳನ್ನು ಕಾರ್ಮಿಕ ಇಲಾಖೆಯ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.

ಮಂಡಳಿಯು PWFVS ಅನ್ನು ಕಾರ್ಯಗತಗೊಳಿಸುವ ತನಕ, ಪ್ರತಿ ತ್ರೈಮಾಸಿಕದಲ್ಲೂ ಪ್ರತಿಯೊಂದು ವ್ಯವಹಾರಕ್ಕೆ ಸಂಬಂಧಿಸಿದಂತೆ ತಮ್ಮ ಗಿಗ್ ಕಾರ್ಮಿಕರಿಗೆ ಮಾಡಿರುವ ಪಾವತಿಗಳ ವಿವರಗಳನ್ನು ಅಗ್ರಿಗೇಟರ್ ಅಥವಾ ಪ್ಲಾಟ್‌ಫಾರ್ಮ್‌ಗಳಿಗೆ ಸ್ವಯಂ ವರದಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಪ್ರವೀಣ ಕುಮಾರ ಹಣ್ಣಿ)**
ಪೀಠಾಧಿಕಾರಿ-3,
ಕಾರ್ಮಿಕ ಇಲಾಖೆ.

## PROCEEDINGS OF THE GOVERNMENT OF KARNATAKA

**Sub:** Collection gig workers welfare fee under section 20 of the Karnataka Platform Based Gig Workers (Social Security and Welfare) Act, 2025, read with Rule 17 of the Karnataka Platform Based Gig Workers (Social Security and Welfare) Rules, 2025.

**Ref:**
1. Government Notification No. DPAL 37 SHASANA 2024, dated: 12.09.2025.
2. Government Notification No. LD 413 LET 2023 dated: 19.11.2025

---

**Preamble**:

The Government of Karnataka in order to extend social security benefits to the gig and platform workers and also to raise fee in order to fund the social security schemes enacted the Karnataka Platform Based Gig Workers (Social Security and Welfare) Act, 2025, as notified in ref no 1. Further, in ref no 2 through the Government Notification, Karnataka Platform Based Gig Workers (Social Security and Welfare) Rules, 2025 has been notified.

The levy and collection of welfare fee under the above Act and Rules is mandatory from all the platforms mentioned in the schedule-I. The welfare fee is levied on the final payouts made to the gig workers in each of the gig work that they undertake through the digital intermediary.

Section 20 from the Act is reproduced hereunder;

> "**20. Gig Worker's Welfare Fee**.- (1) There shall be charged, from an aggregator or platform, a welfare fee known as the Platform Based Gig Workers Welfare Fee, which shall be not less than one percent but not more than five percent of the payout to the platform based Gig worker in each transaction as may be notified by the State Government within six months of the Act coming into force.

(2) The State Government shall specify through a notification different percentage on the payout, with or without a cap on the Gig worker welfare fee on each transaction, for different categories of aggregator or platform as Specified in Schedule.

(3) Such fee shall be collected by the State Government in such manner and within such time as may be prescribed.

(4) The aggregator or platform shall deposit the welfare fee levied under this Act, at the end of each quarter in such manner as may be prescribed."

Further, the definition of the 'aggregator', 'platform' and 'payout' and 'welfare fee' is provided hereunder;

**'Sec (2) (b) "Aggregator"** means a digital intermediary for a buyer of goods or user of a service to connect with the seller or the service provider, and includes any entity that coordinates with one or more aggregators for providing the services;'

**'Sec 2 (f) "Payout"** means any final payments made by the aggregator or platform to the gig worker for any work performed or service rendered through a platform.'

**'Sec 2 (g) "Platform"** means any arrangement providing a service through electronic means, at the request of a recipient of the service, involving the organization of work performed by individuals at a certain location in return for payment, and involving the use of automated monitoring and decision making systems or human decision making that relies on data.'

**'Sec 2 (m) "Welfare Fee"** means the fee levied under sub-section (1) of section 20 of this Act;'

As per the provisions of the section 21 of the Act, the payment and welfare fee verification system is provided below;

**21. Payment and Welfare Fee Verification System**.- (1) All payments made to workers generated on platform shall be mapped on to a Payment and Welfare Fee Verification System (PWFVS) administered by the State Government and monitored by the Board.

(2) Every payment made to Gig workers and the welfare fee deducted by platforms shall be sent to Payment and Welfare Fee Verification System (PWFVS) for each transaction related to platform based Gig worker in such manner as may be prescribed.

(3) The details of welfare fee collected and spent at the Gig workers level shall be disclosed and made available on the Payment and Welfare Fee Verification System (PWFVS) portal.

(4) The Payment and Welfare Fee Verification System (PWFVS) shall be in compliance with the applicable Central and State legislations on data protection for the time being in force.

Provided that, until the operationalization of the Payment and Welfare Fee Verification System (PWFVS) by the Board, the Government may exempt such aggregator or platform who duly self report and submit details of the payouts made to their Gig workers in each of the transaction every quarterly.

Further, every platform or aggregator shall mandatorily pay the welfare fee as prescribed under Rule 17 of the Karnataka Platform Based Gig Workers (Social Security and Welfare) Rules, 2025, which is reproduced below;

> '**Rule17. Collection of welfare fee**.- (1) The State Government shall collect the welfare fee as prescribed under sub-section (3) of section 20 of the Act in the following manner:
>
> (2) The aggregator shall within five working days from the end of each quarter, automatically calculate the welfare fee and self declare such welfare fee on a quarterly basis in a simple standardized format and pay the welfare fee at such rates (excluding settled payments) to be notified by the government from time to time.'

**Explanation.**-Settled payments means any tips, ex-gratia/event-based/special payment(s) including referral fees, incentives and other such similar payments.'

In order to enforce the above Act and Rules and to extend social security measures to the gig and platform workers working in the state of Karnataka, the Government has decided to levy and collect the welfare fee as defined and explained above.

All the platforms and aggregators falling within the definition mentioned above and included in schedule-I of the Act shall mandatorily pay the welfare fee with immediate effect. In this regard, the following Government order is issued.

**GOVERNMENT ORDER NO. LD 413 LET 2023,**
**BENGALURU, DATED: 13/02/2026**

As explained in the preamble, in order to enforce the provisions of the Karnataka Platform Based Gig Workers (Social Security and Welfare) Act, 2025 and the Karnataka Platform Based Gig Workers (Social Security and Welfare) Rules, 2025, it is ordered that all the platforms and aggregators operating within the state of Karnataka shall pay the payouts made to their gig workers in every gig work undertaken by them as per the rates mentioned below with effect from the date of issuance of this order and until further orders.

**1. Ride-Hailing Services.**

1. Two-Wheeler (2W): 1% and a Cap of ₹0.50.
2. Three-Wheeler (3W): 1% and a Cap of ₹0.75.
3. Four-Wheeler (4W): 1% and a Cap of ₹1.00.

**2. Food and Grocery Delivery Services.**

1. 2W:1% and a Cap of ₹0.50.

**3. Logistics Services.**

1. Two-Wheeler (2W): 1% and a Cap of ₹0.50.
2. Three-Wheeler (3W): 1% and a Cap of ₹0.75.
3. Light Commercial Vehicle (LCV): 1% and a Cap of ₹1.00.
4. Heavy Commercial Vehicle (HCV): 1% and a Cap of ₹1.50.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**4. E-Marketplace Services.**

1. 2W:1% and a Cap of ₹0.50.
2. Three-Wheeler (3W): 1% and a Cap of ₹0.75.
3. Light Commercial Vehicle (LCV): 1% and a Cap of ₹1.00.

**5. Professional Activity Providers.**

1. 1% and a Cap of ₹1.50.

The bank details for making the payment of the welfare fee will be provided on the website of the Labour Department.

Until the authority operationalizes the PWFVS, aggregators or platforms are allowed to self-report to provide details of the payments made to their gig workers for each transaction on a quarterly basis.

By Order and in the name of
the Governor of Karnataka,

(**Praveena Kumara Hanni**)
Desk Officer-3,
Labour Department.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH